ಓ ಎಸ್ 16/2013

ಪಿಡಬ್ಲೂ-1

ದಿಃ 06.02.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ ಎನ್ ವಕೀಲರಿಂದಃ

ಪ್ರತಿವಾದಿ ನಂಬರ 1, 2, 3(ಎ) ಮತ್ತು 5 ಇವರು ದಾವಣಗೆರೆ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಭೂಮಾಪನ ರಿವಿಜನ್ ನಂಬರ 3/2012-13 ನನ್ನ ವಿರುದ್ಧ ಸರ್ವೆ ನಂಬರ 85 ರಲ್ಲಿರುವ ಎಲ್ಲಾ ಪೋಡುಗಳನ್ನು ರದ್ದು ಪಡಿಸಲು ಅರ್ಜಿಯನ್ನು ಸಲ್ಲಿಸಿದ್ದರು ಎನ್ನುವುದು ನಿಜ. ಸದರಿ ಅರ್ಜಿಯನ್ನು ವಿಚಾರಣೆ ಮಡಿದ ನಂತರ ಜಿಲ್ಲಾಧಿಕಾರಿಗಳು ಸದರಿ ಅರ್ಜಿಯನ್ನು ಪುರಸ್ಕಾರ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾಡಿರಬಹುದು ಎಂದು ಹೇಳುತ್ತಾರೆ. ನಮ್ಮ ಮತ್ತು ಪ್ರತಿವಾದಿಗಳ ಮಾಲೀಕತ್ವ , ವಿಸ್ತೀರ್ಣ ಮತ್ತು ಅನುಭವ ದಾಖಲಾತಿಗಳ ಆಧಾರದ ಮೇಲೆ ಹೊಸದಾಗಿ ಅಳತೆ ಮಾಡಿಸಿ ಪೋಡ್ ಮಾಡಿಸಿಕೊಳ್ಳಲು ನಮ್ಮದು ತಕರಾರು ಇರುವುದಿಲ್ಲ. ನನ್ನ ಜಮೀನು ಸರ್ವೆ ನಂಬರ 85 ಮಲೇಬೆನ್ನೂರಿನಿಂದ ಅರಳಳ್ಳಿಗೆ ಹೋಗುವ ರಸ್ತೆಯಿಂದ ಪ್ರಾರಂಭಗೊಳ್ಳುತ್ತದೆ ಎನ್ನುವುದು ನಿಜ. ಸದರಿ ರಸ್ತೆಯ ದಕ್ಷಿಣಕ್ಕೆ ಅಳತೆ ಮಾಡಿಸಿದರೆ ನಮ್ಮ ಜಮೀನು ಬರುತ್ತದೆ. ಸದರಿ ರಸ್ತೆಯ ಉತ್ತರ ಭಾಗಕ್ಕೆ ಡಿ ಆರ್ ಹನುಮಂತಪ್ಪ ತಂದೆ ರಾಮಲಿಂಗಪ್ಪ ಇವರಿಗೆ 18 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎನ್ನುವುದು ನಿಜ. ಅದರ ನಂತರ ಉತ್ತರಕ್ಕೆ ನಮ್ಮ ಜಮೀನಿನಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಬನ್ನಿಕೋಡು ರಸ್ತೆ ಹೋಗುತ್ತದೆ ಎನ್ನುವುದು ನಿಜ. ಸದರಿ ರಸ್ತೆ 30 ಅಡಿ ಅಗಲ ಇರುತ್ತದೆ. ಅರಳಳ್ಳಿ ರಸ್ತೆ ಅಂದಾಜು 40 ಅಡಿ ಬರಬಹುದು. ಎರಡು ರಸ್ತೆಗಳ ಪೂರ್ವ ಪಶ್ಚಿಮ ಉದ್ದ 320 ಅಡಿ ಬರಬಹುದು. ಮಲೇಬೆನ್ನೂರು ಅರಳಳ್ಳಿ ಹೋಗುವ ರಸ್ತೆ ನಮ್ಮ ಮತ್ತು ಪ್ರತಿವಾದಿಗಳ ಜಮೀನಿನಲ್ಲಿ ಹೋಗುತ್ತದೆ. ಸದರಿ ರಸ್ತೆ ಉತ್ತರ ದಕ್ಷಿಣವಾಗಿ ಇರುತ್ತದೆ. ಈ ಎರಡು ರಸ್ತೆಗಳಿಗೆ ಸಂಬಂದಿಸಿದಂತೆ ಭೂ-ಸ್ವಾದೀನವಾದ ಜಮೀನಿಗೆ ಸಂಬಂದಪಟ್ಟಂತೆ ನಾವು ಪರಿಹಾರವನ್ನು ತೆಗೆದುಕೊಂಡಿಲ್ಲ. ಬನ್ನಿಕೋಡು ರಸ್ತೆಯಿಂದ ಚಾನಲ್ ರಸ್ತೆ ವರೆಗೆ 4 ವರೆ ಎಕರೆ ಸಾಗುವಳಿ ಜಮೀನು ಹಾಗೂ ನಿವೇಶನ ಆದಂತಹ 32 ಗುಂಟೆ ನಮ್ಮ ಜಮೀನು ಇರುತ್ತದೆ. ಸರ್ವೆ ನಂಬರ 85 ರ ಜಮೀನನ್ನು ನ್ಯಾಯಾಲಯದ ಮೂಲಕ ಅಳತೆ ಮಾಡಿಸಲು ನಮ್ಮದು

ಯಾವುದೇ ತಕರಾರು ಇರುವುದಿಲ್ಲ. ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಇರುವಂತಹದ್ದೆ ಪ್ರತಿವಾದಿಗಳ ಆಸ್ತಿ ಎನ್ನುವುದು ನಿಜ. ಪ್ರತಿವಾದಿ ನಂಬರ 3 ಎ ಇವರಿಗೆ ಸಂಬಂದಪಟ್ಟಂತಹ 15 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಬಸಮ್ಮ ಕೋಂ ತಿಪ್ಪಣ ಇವರ ಹೆಸರಿಗೆ 1 ಎಕರೆ 10 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಐರಣಿ ಸುನಿತಾ ಕೋಂ ಐ ಹನುಮಂತಪ್ಪ ಇವರ ಹೆಸರಿಗೆ 3 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಮಲ್ಲೂರು ಬಸಪ್ಪ ತಂದೆ ಸಿದ್ದಪ್ಪ ಇವರ ಹೆಸರಿಗೆ 3 ವರೆ ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ತಿಪ್ಪೇಸ್ವಾಮಿ ತಂದೆ ದೊಡ್ಡ ಬಸಪ್ಪ ಇವರ ಹೆಸರಿಗೆ 1 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಕೆಂಚಮ್ಮಕ್ಕ ಹನುಮಂತಪ್ಪ ತಂದೆ ಹಾಲಪ್ಪ ಇವರ ಹೆಸರಿಗೆ 2 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಜೊಳ್ಳೀರ ಬೀರಪ್ಪ ತಂದೆ ಕರಿಯಪ್ಪ ಇವರ ಹೆಸರಿಗೆ 4 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ . ಶಿವಕುಮಾರ ತಂದೆ ಬಸಪ್ಪ ಇವರ ಹೆಸರಿಗೆ 8 ವರೆ ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಕಲ್ಲಪ್ಪರ ಆಂಜಿನಪ್ಪ ತಂದೆ ಕರಿಯಪ್ಪ ಇವರ ಹೆಸರಿಗೆ 1 ವರೆ ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಪ್ರೇಮಕ್ಕ ಕೋಂ ಬಾಲಪ್ಪರ ಕೃಷ್ಣಪ್ಪ ಇವರ ಹಸೆರಿಗೆ 3 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಹೊಸಳ್ಳಿ ಹನುಮಂತಪ್ಪ ತಂದೆ ಸಣ್ಣ ತಿಮ್ಮಪ್ಪ ಇವರ ಹೆಸರಿಗೆ 20 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಎಂ.ಕೆ ಹನುಮಂತಪ್ಪ ತಂದೆ ಕೃಷ್ಣಪ್ಪ ಇವರ ಹೆಸರಿಗೆ 2 ಗುಂಟೆ ಜಮೀನು ಇರುತ್ತದೆ ಎನ್ನುವುದು ಗೊತ್ತಿಲ್ಲ. ಬಸಮ್ಮ ಕೋಂ ತಿಪ್ಪಣ್ಣ ಮತ್ತು ಸುಮಂಗಲ ಇವರ ಮಾಲೀಕತ್ವದ ಮನೆ ಇರುತ್ತದೆ ಎನ್ನುವುದು ಗೊತ್ತಿಲ್ಲ.

ಹೆಚ್.ಪಿ ರಘು ನನ್ನ ತಮ್ಮ. ಸದರಿ ರಘು ಸರ್ವೆ ನಂಬರ 85 ರಲ್ಲಿ ಒಂದು ವಾಸದ ಮನೆ ಬಿಟ್ಟು ಹೋಗಿರುತ್ತಾನೆ ಎನ್ನುವುದು ನಿಜ. ಸದರಿ ಮನೆಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಆಸ್ತಿ ಅಂದರೆ ಸಾಕ್ಷಿ ನಮ್ಮ ಆಸ್ತಿ ಎಂದು ಹೇಳುತ್ತಾರೆ. ಸದರಿ ಮನೆಯ ಪಶ್ಚಿಮ ದಿಕ್ಕಿನ ಗೋಡೆಯ ಉತ್ತರ ದಕ್ಷಿಣವಾಗಿ ನಮ್ಮ ಮತ್ತು ಪ್ರತಿವಾದಿಗಳ ಜಮೀನುಗಳ ಮಧ್ಯ ಒಡ್ಡು ಇರುತ್ತದೆ ಅಂದರೆ ಸರಿಯಲ್ಲ. ಸದರಿ ರಘು ಇವರ ಮನೆಯ ಪಶ್ಚಿಮ ದಿಕ್ಕಿಗೆ ಚಾನಲವರೆಗೂ ಪ್ರತಿವಾದಿಗಳ ಮತ್ತು ಮೇಲೆ ಹೇಳಿದ ವ್ಯಕ್ತಿಗಳ ಜಮೀನುಗಳು

ಇರುತ್ತವೆ ಅಂದರೆ ಸರಿಯಲ್ಲ. ಸದರಿ ರಘು ಇವರ ಮನೆಯ ಪಶ್ಚಿಮಕ್ಕೆ ನನಗೆ ಸೇರಿದ 13 ಇಂಟು 420 ಅಡಿಯ ಜಾಗ ಇದ್ದು ಅದರ ನಂತರ ಪ್ರತಿವಾದಿಗಳ ಜಮೀನು ಮತ್ತು ಮೇಲೆ ಹೇಳಿದವರ ಜಮೀನು ಇರುತ್ತವೆ. ನಾನು ಎನ್.ಎ ಮಾಡಿಸುವ ಸಮಯದಲ್ಲಿ ಅಕ್ಕ ಪಕ್ಕದವರಿಗೆ ನೋಟಿಸನ್ನು ಕೊಟ್ಟು ಸರ್ವೆಯರ ಇವರ ಕಡೆಯಿಂದ ಸರ್ವೆ ಮಾಡಿಸಿರುತ್ತೇವೆ. ಎನ್.ಎ ಉದ್ದೇಶದಿಂದ ನೋಟಿಸು ಕೊಟ್ಟಂತಹ ದಾಖಲೆಗಳನ್ನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಬನ್ನಿಕೋಡು ರಸ್ತೆಯಿಂದ ಚಾನಲ್ ರಸ್ತೆವರೆಗೆ ಇರುವಂತಹ ನಮ್ಮ ಮತ್ತು ಪ್ರತಿವಾದಿಗಳ ಆಸ್ತಿಯ ಮಧ್ಯ ರಸ್ತೆ ಇರುವುದಿಲ್ಲ. ಅರಳಳ್ಳಿ ರಸ್ತೆಯಿಂದ ಚಾನಲ್ ರಸ್ತೆವರೆಗೆ ನಮ್ಮ ಜಮೀನು 2 ಎಕರೆ 24 ಗುಂಟೆ ಸಾಗುವಳಿ ಜಮೀನು , 32 ಗುಂಟೆ ಹಾಗೂ 36 ಗುಂಟೆ ಜಮೀನು ಇರುತ್ತವೆ. ಅಷ್ಟು ಜಮೀನುಗಳನ್ನು ನ್ಯಾಯಾಲಯದಿಂದ ಹದ್ದು ಬಸ್ತು ಮಾಡಿಸಿಕೊಳ್ಳಲು ತೊಂದರೆ ಇಲ್ಲ. ಚಾನಲ್ ರಸ್ತೆಯಿಂದ ಬನ್ನಿಕೋಡು ರಸ್ತೆವರೆಗೆ ಇರುವಂತಹ ನಮ್ಮ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆ ಎನ್ನುವುದು ನಮ್ಮ ಕೇಸು. ಪ್ರತಿವಾದಿಗಳು ಒತ್ತುವರಿ ಮಾಡಿದ ಕುರಿತು ಸರ್ವೆ ಸ್ಕೆಚನ್ನು ಹಾಜರು ಪಡಿಸಿರುತ್ತೇವೆ. ನಿಪಿ 12 ಇದು ಪ್ರತಿವಾದಿಗಳು ಒತ್ತುವರಿ ಮಾಡಿರುವ ಜಮೀನಿನ ಸ್ಕೆಚ್. ನಿಪಿ 12 ರಲ್ಲಿ ಕೆಂಪು ಬಣ್ಣದಿಂದ ಗುರುತಿಸಿರುವ ಅದರ ಪಕ್ಕದಲ್ಲಿ ಡಾಟ್ ಹಾಕಿರುವ ಲೈನಗಳು ಕಾಣಿಸುತ್ತವೆ. ಕೆಂಪು ಬಣ್ಣದಿಂದ ತೋರಿಸಿರುವಂತಹ ಅಂಚಿಗೆ ರಸ್ತೆ ಮುಗಿಯುತ್ತದೆ ಎನ್ನುವುದು ನಿಜ. ನಿಪಿ 12 ರಲ್ಲಿ ತೋರಿಸಿರುವ ಹಳ್ಳದಿಂದ ಕೆಂಪು ಬಣ್ಣದವರೆಗೆ ಎಷ್ಟು ಎಕರೆ ಜಮೀನು ಬರುತ್ತದೆ ಎನ್ನುವುದು ಗೊತ್ತಿಲ್ಲ. ನಿಪಿ 12 ರಲ್ಲಿ ಕೆಂಪು ಬಣ್ಣದಿಂದ ತೋರಿಸಿರುವಂತಹ ಜಾಗದವರೆಗೆ ಹಳ್ಳದಿಂದ ಯಾರು ಯಾರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ 12 ರಲ್ಲಿ ಮಲೇಬೆನ್ನೂರುನಿಂದ ಅರಳಳ್ಳಿಗೆ ಊರ ಒಳಗೆ ಹೋಗುವ ರಸ್ತೆಯನ್ನು ತೋರಿಸಿಲ್ಲ ಎನ್ನುವುದು ನಿಜ. ನಿಪಿ 12 ರಲ್ಲಿ ಬನ್ನಿಕೋಡು ರಸ್ತೆಯನ್ನು ತೋರಿಸಿಲ್ಲ ಎನ್ನುವುದು ನಿಜ. ಚಾನಲ್ ರಸ್ತೆ ಮತ್ತು ಕುಂಬಳೂರು ರಸ್ತೆಯನ್ನು ನಿಪಿ 12 ರಲ್ಲಿ ತೋರಿಸಿಲ್ಲ ಎನ್ನುವುದು ನಿಜ. ತುಂಬುಕಾಲುವೆ ಮತ್ತು ಸಾರಾ ಕಾಲುವೆ ಇವುಗಳನ್ನು ನಿಪಿ 12 ರಲ್ಲಿ ತೋರಿಸಿಲ್ಲ ಎನ್ನುವುದು ನಿಜ. ನಿಪಿ 12 ನ್ನು 2002-2003 ರಲ್ಲಿ ಮಾಡಿಸಿರುತ್ತೇವೆ. ನಿಪಿ 12 ತಪ್ಪು ಎಂದು ಪ್ರತಿವಾದಿಗಳು ಡಿ.ಡಿ.ಎಲ್.ಆರ್ ಇವರ ಮುಂದೆ

ಮೇಲ್ಮನವಿಯನ್ನು ಸಲ್ಲಿಸಿದ್ದರು ಎನ್ನುವುದು ನಿಜ. ಡಿ.ಡಿ.ಎಲ್.ಆರ್ ಇವರ ಮುಂದೆ ಸಲ್ಲಿಸಿರುವ ಮೇಲ್ಮನವಿಯನ್ನು ಅವರು ವಜಾಗೊಳಿಸಿರುತ್ತಾರೆ ಎನ್ನುವುದು ನಿಜ. ಸದರಿ ಆದೇಶದ ಮೇಲೆ ಜಿಲ್ಲಾಧಿಕಾರಿಗಳ ಮುಂದೆ ರಿವಿಜನ್ ಸಂಖ್ಯೆ 3/2012-13 ಸಲ್ಲಿಸಿರುತ್ತಾರೆ ಎನ್ನುವುದು ನಿಜ. ನಿಪಿ 10 ರಿಂದ 19 ರ ದಾಖಲಾತಿಗಳನ್ನು ರಿವಿಜನ್ ಸಂಖ್ಯೆ 3/2012-13 ರಂತೆ ವಜಾಗೊಳಿಸಿರುತ್ತದೆ ಎನ್ನುವುದು ನಿಜ. 2002-2003 ರಲ್ಲಿ ನಮ್ಮ ಜಮೀನು ಎನ್.ಎ ಆಗಿರುತ್ತದೆ. 30 ಗುಂಟೆ ಜಮೀನು ಒತ್ತುವರಿ ಆಗಿರುವುದನ್ನು ಬಿಟ್ಟು ಕೊಡುತ್ತೇವೆ ಎಂದು ನಿಪಿ 20 ರ ಪ್ರಕಾರ ಬರೆದು ಕೊಟ್ಟಿರುತ್ತಾರೆ. ನಿಪಿ 20 ರಲ್ಲಿ ಬಿ ಷಡ್ಯೂಲ್ ಆಸ್ತಿಯ ಬಗ್ಗೆ ಬರೆದಿಲ್ಲ ಅಂದರೆ ಸಾಕ್ಷಿ ಎರಡು ಸೇರಿಸಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ನಾವು ಎನ್ ಎ ಮಾಡಿಸಿರುವುದು ನೀರಾವರಿ ಜಮೀನು ಅಲ್ಲ. ಪಶ್ಚಿಮಕ್ಕೆ ಇರುವ ಪ್ರತಿವಾದಿಯರ ಜಮೀನು ನೀರಾವರಿ ಜಮೀನು ಅಲ್ಲ. ಚಾನಲ್ ರಸ್ತೆಯಿಂದ ಮೂಡಲ ಬಸಾಪುರದ ಗಡಿಯವರೆಗೆ ನನ್ನ ಮತ್ತು ಪ್ರತಿವಾದಿಯರ ಮಧ್ಯ ಜಮೀನಿನ ವಿಚಾರದಲ್ಲಿ ಯಾವುದೇ ಸಮಸ್ಯೆ ಇಲ್ಲ ಎನ್ನುವುದು ನಿಜ. ನಿಪಿ 20 ರಲ್ಲಿ ನಮ್ಮ ತಮ್ಮನ ಹೆಸರು ಮತ್ತು ಅವನ ಸಹಿ ಇರುವುದಿಲ್ಲ. ನಾನು ಮತ್ತು ನಮ್ಮ ತಮ್ಮ ಆಸ್ತಿಯನ್ನು ಹಿಸ್ಸೆ ಮಾಡಿಕೊಂಡಿದ್ದೆವು. ನಮ್ಮ ತಮ್ಮ ಮನೆ ಕಟ್ಟಿಕೊಂಡಿರುವಂತಹ ಜಮೀನು ನಮ್ಮ ತಮ್ಮನ ಹೆಸರಿಗೆ ಇರುತ್ತದೆ. ಅಲ್ಲಿ ನಮ್ಮ ತಮ್ಮನ ಹಿಸ್ಸೆಗೆ ಉತ್ತರ ದಕ್ಷಿಣ 150 ಪೂರ್ವ ಪಶ್ಚಿಮ 76 ಅಡಿ ಬಂದಿರುತ್ತದೆ. ನನ್ನ ತಮ್ಮ ಅವನ ಹಿಸ್ಸೆಗೆ ಬಂದಂತಹ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಅವನು ಸ್ವಾಧೀನ ಅನುಭವದಲ್ಲಿರುತ್ತಾನೆ ಎನ್ನುವುದು ನಿಜ. ಸದರಿ 150 ಇಂಟು 76 ಅಡಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಜಮೀನು ಬರುತ್ತದೆ ಎನ್ನುವುದು ನಿಜ. ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನನ್ನ ತಮ್ಮ ದಾವೆಯನ್ನು ಸಲ್ಲಿಸಿಲ್ಲ ನಾನು ಸಲ್ಲಿಸಿರುತ್ತೇನೆ. ಸದರಿ ಆಸ್ತಿ ನನ್ನ ತಮ್ಮನ ಹಿಸ್ಸೆಗೆ ಹೋಗಿರುವ ಜಾಗದಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ಪಾಲು ವಿಭಾಗ ಪತ್ರದಲ್ಲಿ ಹೇಳಿ ಬರೆದಿಲ್ಲ. ನನ್ನ ತಮ್ಮ ಒತ್ತುವರಿ ಮಾಡಿರುವಂತಹ ಜಮೀನಿಗೆ ಸಂಬಂದಪಟ್ಟಂತೆ ದಾವೆಯನ್ನು ಸಲ್ಲಿಸಲು ನನಗೆ ಅಧಿಕಾರ ಪತ್ರವನ್ನು ಕೊಟ್ಟಿಲ್ಲ ಅಂದರೆ ಸಾಕ್ಷಿ ಜಮೀನು ನನ್ನ ಹೆಸರಿಗೆ ಇರುವುದರಿಂದ ನಾನು ಹಾಕಿರುತ್ತೇನೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನಾನು ಮತ್ತು ನನ್ನ ತಮ್ಮ ಪಾಲು ವಿಭಾಗ ಮಾಡಿಕೂಂಡಿರುತ್ತೇವೆ ಎಂದು ಹೇಳಿಲ್ಲ.

ನಿಪಿ 30 ರಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವ ಬಿ ಷಡ್ಯೂಲ್ ಆಸ್ತಿಯ ಬಗ್ಗೆ ಬರೆದಿಲ್ಲ. ನಿಪಿ 30 ರಲ್ಲಿ ಸರ್ವೆ ನಂಬರ 85/6 ರಲ್ಲಿ ನಿವೇಶನಗಳು ಆಗಿರುವುದನ್ನು ಬರೆದಿಲ್ಲ. ನಾನು ಮತ್ತು ನನ್ನ ತಮ್ಮ ಭಾಗ ಮಾಡಿಕೊಂಡಿರುವ ಪತ್ರ ಇರುತ್ತದೆ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಪತ್ರದಲ್ಲಿ ಪ್ರತಿವಾದಿಯರು ಒತ್ತುವರಿ ಮಾಡಿಕೊಂಡಿರುವ ಆಸ್ತಿಗಳ ಬಗ್ಗೆ ಬರೆದಿರುತ್ತೇವೆ.. ಅದನ್ನು ತಂದು ಹಾಜರು ಪಡಿಸುತ್ತೇನೆ. ಸದರಿ ಪಾಲು ವಿಭಾಗ ಪತ್ರದಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವ ಕುರಿತು ಒಕ್ಕಣಿಕೆ ಇರುತ್ತದೆ. ನಿಪಿ 48 ರಲ್ಲಿ ಒತ್ತುವರಿ ಆಗಿರುವ ಕುರಿತು ಬರೆದಿಲ್ಲ. ನಿಪಿ 49 ರಲ್ಲಿ ಒತ್ತುವರಿ ಆಗಿರುವ ಬಗ್ಗೆ ಬರೆದಿಲ್ಲ. ನಿಪಿ 55 ರಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವ ಕುರಿತು ಯಾವುದೇ ಗುರುತುಗಳು ಇಲ್ಲ ಎನ್ನುವುದು ನಿಜ. ಅದೇ ರೀತಿ ನಿಪಿ 56 ರಲ್ಲಿ ಹೇಳಿಲ್ಲ. ಅದೇ ರೀತಿ ನಿಪಿ 57 ರಲ್ಲಿಯಾ ಸಹ ಹೇಳಿಲ್ಲ. ನಿಪಿ 58 ರಿಂದ 70 ನ್ನು ನೀಡುವ ಸಮಯದಲ್ಲಿ ಸಂಬಂದಪಟ್ಟ ಗ್ರಾಮ ಪಂಚಾಯತಿಯವರು ಬಂದು ಅಳತೆ ಮಾಡಿ ಮಹಜರ್ ಮಾಡಿರುವ ಕುರಿತು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸರ್ವೆ ದಾಖಲಾತಿಗಳು ಕಾನೂನು ಬದ್ದವಾಗಿಲ್ಲ ಎಂದು ಜಿಲ್ಲಾಧಿಕಾರಿಗಳು ಅವುಗಳನ್ನು ವಜಾ ಮಾಡಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಬಿ ಷಡ್ಯೂಲ್ ಆಸ್ತಿಯನ್ನು ಪ್ರತಿವಾದಿಗಳು ಯಾವಾಗ ಒತ್ತುವರಿ ಮಾಡಿರುತ್ತಾರೆ ಎಂದು ನಿರ್ದಿಷ್ಟವಾಗಿ ದಿನಾಂಕವನ್ನು ಹೇಳಲು ಆಗುತ್ತದೆ. ಒತ್ತುವರಿ ಆಗಿರುವ ಕುರಿತು ನಮ್ಮ ಮತ್ತು ಪ್ರತಿವಾದಿಗಳ ಮಧ್ಯ ಗಲಾಟೆ ಆಗಿ ಪೋಲಿಸ ಠಾಣೆಗೆ ಹೋಗಿದ್ದು ಆದರೆ ಅವರು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ. ನಾವು ಪಿರ್ಯಾದಿಯನ್ನು ಕೊಟ್ಟ ಕುರಿತು ಮತ್ತು ಪೋಲಿಸರು ಕೊಟ್ಟ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವಂತಹ ಎ ಷಡ್ಯೂಲ್ ಆಸ್ತಿಯನ್ನು ಇಂತಹ ದಿನಾಂಕದಂದು ಬಿಟ್ಟು ಕೊಟ್ಟಿರುತ್ತಾರೆ ಎಂದು ಬರೆದಿಲ್ಲ. ದಿಃ 01-08-2011 ರಂದು ಪ್ರತಿವಾದಿಗಳು ಬಿ ಷಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿ ಸ್ವಾದೀನತೆಯಲ್ಲಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಜಮೀನು ಹಾಗೂ ಆಸ್ತಿಯನ್ನು ಒತ್ತುವರಿ ಮಾಡದೇ ಇದ್ದರೂ ಸಹ ಒತ್ತುವರಿ ಮಾಡಿರುತ್ತಾರೆ ಎಂದು

ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆ ಬಗ್ಗೆ ನಮ್ಮ ವಕೀಲರು ಹೇಳಿಲ್ಲ. ಪ್ರತಿವಾದಿಗಳು ಬಿ ಷಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿ ಅವರು ಸ್ವಾದೀನ ಅನುಭವದಲ್ಲಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.